## ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/01/ಇಎಸ್‌ಟಿ(9)/2018 / 3174

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 25/02/2019

### ಹಿಂಬರಹ

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿಆಸುಇ 52 ಸೇನಿಎಫ್ 2018 ಬೆಂಗಳೂರು ದಿನಾಂಕ:13/02/2019ರ ಪ್ರತಿಯನ್ನು ಮಾಹಿತಿಗಾಗಿ ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

1. ಈ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು, ಸ್ಟೆರಿಕ್‌ಸಂಸ್ಥೆ, ಬೆಂಗಳೂರು, ಸರ್ಕಾರಿ ಗಣಿ ಶಿಕ್ಷಣ ಶಾಲೆ ಕೆ.ಜಿ.ಎಫ್. ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ [ಇಲಾಖಾ ವೆಬ್‌ಸೈಟ್ ಮುಖಾಂತರ]
2. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ, ಜಂಟಿ ನಿರ್ದೇಶಕರು(ಆಡಳಿತ), ಆಡಳಿತಾಧಿಕಾರಿ, ಸಹಾಯಕ ಆಡಳಿತಾಧಿಕಾರಿ (1), (2) ಹಾಗೂ (3), ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ರಿಜಿಸ್ಟ್ರಾರ್ (ಆಡಳಿತ) ಮಾಹಿತಿಗಾಗಿ
3. ನಿರ್ದೇಶಕರ ಆಪ್ತ ಶಾಖೆಗೆ
4. ಈ ನಿರ್ದೇಶನಾಲಯದ ಇಎಸ್‌ಟಿ(8)ಬಿ ಮತ್ತು ಇಎಸ್‌ಟಿ(8)ಸಿ. ವಿಭಾಗಗಳಿಗೆ ಮಾಹಿತಿಗಾಗಿ
5. ಈ ನಿರ್ದೇಶನಾಲಯದ ನಗದು ವಿಭಾಗಕ್ಕೆ ಮಾಹಿತಿಗಾಗಿ
6. ಈ ನಿರ್ದೇಶನಾಲಯದ ಇ.ಎಸ್.ಟಿ.(1) ರಿಂದ (10) ವಿಭಾಗಕ್ಕೆ ಮಾಹಿತಿಗಾಗಿ
7. ಈ ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ

ಆಡಳಿತಾಧಿಕಾರಿ

Sh-est(9) Endsmnt

18662

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 52 ಸೇನಿಎಫ್ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:13.02.2019.

## ಅಧಿಕೃತ ಜ್ಞಾಪನ

**ವಿಷಯ:** ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತರ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯ ವೈದ್ಯಕೀಯ ವೆಚ್ಚದ ಮರುಪಾವತಿ ಪ್ರಕರಣಗಳಲ್ಲಿ ಮರುಪಾವತಿಸಬಹುದಾದ ಅರ್ಹತಾ ಮೊತ್ತದ ಕುರಿತು.

**ಉಲ್ಲೇಖ:** 1] ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪತ್ರ ಸಂಖ್ಯೆ: ಎಂಡಿಎ(ಬೆಂ) 245/2017-18 ದಿನಾಂಕ:14.03.2018.

2] ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಸಿ.ಜಿ.ಹೆಚ್.ಎಸ್. ನಿರ್ದೇಶನಾಲಯದ ದಿನಾಂಕ:26.11.2014ರ ಕಛೇರಿ ಆದೇಶ ಸಂಖ್ಯೆ: F.No.S-11045/36/2012-CGHS(HEC).

JD (Ad) / E&I (B)A

***

1. ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ನಿಯಮಗಳನ್ವಯ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರು ಸರ್ಕಾರಿ ಆಸ್ಪತ್ರೆ/ ಸರ್ಕಾರದ ಮಾನ್ಯತೆ ಹೊಂದಿದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಯ ವೆಚ್ಚವನ್ನು ಸಿ.ಜಿ.ಹೆಚ್.ಎಸ್. ದರಪಟ್ಟಿಯನ್ವಯ ಆಯಾ ಇಲಾಖಾ ಹಂತದಲ್ಲಿ ಕ್ರಮ ತೆಗೆದುಕೊಳ್ಳಲು, ಸರ್ಕಾರದ ಮಾನ್ಯತೆ ಹೊಂದಿಲ್ಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಂತಹ ವೆಚ್ಚವನ್ನು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರು ತಿಳಿಸುವ ಅರ್ಹತಾ ಮೊತ್ತದನ್ವಯ ಮರುಪಾವತಿಸಲು ಅವಕಾಶವಿರುತ್ತದೆ.

2. ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಸಹಮತಿ ಮೇರೆಗೆ ಬೆಂಗಳೂರಿನ ಸಿ.ಜಿ.ಹೆಚ್.ಎಸ್. ವಿಭಾಗವು ದಿನಾಂಕ:13.11.2014ರ ಅಧಿಕೃತ ಜ್ಞಾಪನ ಸಂಖ್ಯೆ: 19-3/2014/ADMN-(129)/5287 ರಲ್ಲಿ ಪರಿಷ್ಕೃತ ಸಿ.ಜಿ.ಹೆಚ್.ಎಸ್. ಪ್ಯಾಕೇಜ್ ದರಗಳನ್ನು ನಿಗದಿಪಡಿಸಿ ದಿನಾಂಕ:17.11.2014ರಿಂದ ಜಾರಿಗೆ ಬರುವಂತೆ ಮಂಜೂರಾತಿ ನೀಡಿರುತ್ತದೆ.

3. ನಂತರದಲ್ಲಿ, ದಿನಾಂಕ:26.11.2014ರ ಉಲ್ಲೇಖಿತ[2]ರ ಕಛೇರಿ ಆದೇಶದಲ್ಲಿ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಸಂಬಂಧದಲ್ಲಿ ಚಿಕಿತ್ಸಾ ವಿಧಾನಗಳನ್ನು ವರ್ಗೀಕರಿಸಿ, ಕೆಲವೊಂದು ಷರತ್ತುಗಳೊಂದಿಗೆ ವರ್ಗೀಕೃತ ಚಿಕಿತ್ಸೆಗಳಿಗೆ ತತ್ಸಂಬಂಧದ ಪರಿಷ್ಕೃತ ದರಗಳನ್ನು ನಿಗದಿಪಡಿಸಿರುತ್ತದೆ.

4. ಉಲ್ಲೇಖ[1] ರ ಪತ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯವು ರಾಜ್ಯ ಸರ್ಕಾರಿ ನೌಕರರಿಗೂ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಸಂಬಂಧದಲ್ಲಿ ಭಾರತ ಸರ್ಕಾರ ನಿಗದಿಪಡಿಸಿರುವ ಸಿ.ಜಿ.ಹೆಚ್.ಎಸ್. ದರಗಳನ್ನು ಅಳವಡಿಸಿಕೊಳ್ಳಬಹುದಾಗಿದೆ ಎಂಬ ಅಭಿಪ್ರಾಯವನ್ನು ನೀಡಿರುವ ಹಿನ್ನೆಲೆಯಲ್ಲಿ, ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಉಲ್ಲೇಖ[2] ರಲ್ಲಿನ ಅನುಬಂಧದಲ್ಲಿರುವ **ಚಿಕಿತ್ಸಾ ವಿಧಾನಗಳಿಗೆ** ನಿಗದಿಪಡಿಸಿರುವ ಪರಿಷ್ಕೃತ ದರಗಳನ್ನು ಅನ್ವಯಿಸಿಕೊಂಡು ವೈದ್ಯಕೀಯ ವೆಚ್ಚ ಮರುಪಾವತಿಯನ್ನು ಪರಿಗಣಿಸಲು ರಾಜ್ಯ ಸರ್ಕಾರವು ತೀರ್ಮಾನಿಸಿರುತ್ತದೆ.

5. ಈ ಹಿನ್ನೆಲೆಯಲ್ಲಿ, ಉಲ್ಲೇಖಿತ [2]ರ ಭಾರತ ಸರ್ಕಾರದ ಸಿ.ಜಿ.ಹೆಚ್.ಎಸ್. ಕಛೇರಿ ಆದೇಶದಲ್ಲಿ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದಂತೆ ನಿಗಧಿಪಡಿಸಿರುವ ಪ್ಯಾಕೇಜ್ ಮೊತ್ತವನ್ನು ಆಧರಿಸಿ, ಸಂಧರ್ಭಾನುಸಾರ ಇಲಾಖಾ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ/ ಇಲಾಖಾ ಮುಖ್ಯಸ್ಥರುಗಳು ನಿಯಮಗಳಲ್ಲಿ ಹಾಗೂ ಸರ್ಕಾರದ ವಿವಿಧ ಆದೇಶಗಳಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಪ್ರಕರಣಗಳನ್ನು ಪರಿಶೀಲಿಸಿ ಅರ್ಹ ಮುಂಗಡವನ್ನು/ ವೈದ್ಯಕೀಯ ವೆಚ್ಚವನ್ನು ಮಂಜೂರು ಮಾಡಲು ಕ್ರಮವಹಿಸುವಂತೆ ತಿಳಿಸಲಾಗಿದೆ. ಅಲ್ಲದೇ, ಭಾರತ ಸರ್ಕಾರವು ಈ ಪ್ಯಾಕೇಜ್ ದರಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಿದಲ್ಲಿ, ಈ ಪರಿಷ್ಕೃತ ದರಗಳು ಸದರಿ ಆದೇಶವು ಹೊರಡಿಸಿದ ದಿನಾಂಕದ ನಂತರದಲ್ಲಿ ಚಿಕಿತ್ಸೆ ಪಡೆದ ಪ್ರಕರಣಗಳಿಗೆ ಅನ್ವಯವಾಗುತ್ತವೆಂಬ ಅಂಶವನ್ನೂ ಸಹ ಸ್ಪಷ್ಟೀಕರಿಸಲಾಗಿದೆ.

6. ಪ್ರಸ್ತುತ, ದಿನಾಂಕ:26.11.2014ರ ಉಲ್ಲೇಖಿತ[2]ರ ಕಛೇರಿ ಆದೇಶದಲ್ಲಿ Anaesthesia, Operation Theatre ಮತ್ತು ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದಂತೆ ಗ್ರೇಡ್-I ರಿಂದ ಗ್ರೇಡ್-VI ರವರೆಗೆ ಅನ್ವಯಿಸುವ ದರಗಳು ಕೆಳಕಂಡಂತಿವೆ ಹಾಗೂ ಈ ಸಂಬಂಧದಲ್ಲಿ ಉಲ್ಲೇಖ(2) ರ ಆದೇಶದ ಅನುಬಂಧದಲ್ಲಿ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯ ಚಿಕಿತ್ಸಾ ವಿಧಾನಗಳನ್ನು ಗ್ರೇಡ್‌ಗಳನುಸಾರ ಪಟ್ಟಿ ಮಾಡಲಾಗಿದೆ.

| Sl. No. | Description | Rate in Rupees |
|---|---|---|
| | **ANAESTHESIOLOGY CHARGES** | |
| 1. | Anaesthesia Fees-Grade I | 2700 |
| 2. | Anaesthesia Fees-Grade II | 5000 |
| 3. | Anaesthesia Fees-Grade III | 8000 |
| 4. | Anaesthesia Fees-Grade IV | 10000 |
| 5. | Anaesthesia Fees-Grade V | 14000 |
| 6. | Anaesthesia Fees-Grade VI | 18000 |
| | **SURGICAL ONCOLOGY- [Operation Theatre Hospital Service Charges]** | |
| 1. | Minor OT – Service Charges | 1000 |
| 2. | Minor OT – Drugs/ Consumables [Without GA] | 500 |
| 3. | Minor OT – Drugs/ Consumables [With GA] | 750 |
| 4. | Minor OT – Service Charges –Less than 2 Hrs. | 5000 |
| 5. | Minor OT – Service Charges -2-4 Hrs. | 10000 |
| 6. | Minor OT – Service Charges –More than 4 Hrs. | 20000 |
| 7. | Minor OT – Surgery Charges | 870 |
| | **SURGERY CHARGES** | |
| 1. | Grade I Surgery | 5000 |
| 2. | Grade II Surgery | 12500 |
| 3. | Grade III Surgery | 20000 |
| 4. | Grade IV Surgery | 25000 |
| 5. | Grade V Surgery | 35000 |
| 6. | Grade VI Surgery | 45000 |

7. ಮುಂದುವರೆದು, ಈ ಕೆಳಕಂಡ ಸೂಚನೆಗಳನ್ನು ಕೂಡ ನೀಡಲಾಗಿದೆ:

i. ರಾಜ್ಯ ಸರ್ಕಾರಿ ನೌಕರರಿಗೆ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ನಿಯಮಗಳನ್ವಯ ನಿಯಮ 3(h)(v) ಮತ್ತು ನಿಯಮ 8(3) ರಡಿ ಅರ್ಹವಿರುವ ವಾರ್ಡ್ ಚಾರ್ಜ್‌ಗಳು ಅನ್ವಯಿಸುತ್ತವೆ.

ii. ಕೆಲವು ಗಂಟೆಗಳಿಂದ ಒಂದು ದಿನದವರೆಗಿನ (day care procedure) ಚಿಕಿತ್ಸಾ ವಿಧಾನವಿದ್ದಲ್ಲಿ ಹಾಗೂ ರೋಗಿಯು ಅರ್ಹತಾನುಸಾರದ ವಾರ್ಡ್‌ನಲ್ಲಿ ಒಳರೋಗಿಯಾಗಿ ದಾಖಲಾಗಿದ್ದಲ್ಲಿ, ಒಂದು ದಿನದ ಅರ್ಹ ವಾರ್ಡ್ ಚಾರ್ಜ್ ದರ ಅನ್ವಯಿಸುತ್ತದೆ.

iii. ಕೀಮೋಥೆರಪಿ ಚಿಕಿತ್ಸೆಗೆ ಸಂಬಂಧಿಸಿದಂತೆ ಅರ್ಹ ವಾರ್ಡ್ ಚಾರ್ಜ್, ತಪಾಸಣೆ ವೆಚ್ಚ ಹಾಗೂ ಔಷಧಿಗಳ ವೆಚ್ಚಕ್ಕೆ ಸಂಬಂಧಿಸಿದಂತೆ ಅರ್ಹತಾ ಮೊತ್ತವನ್ನು ಚಿಕಿತ್ಸಾವಿಧಾನದ ಅರ್ಹತಾ ಮೊತ್ತಕ್ಕೆ ಹೆಚ್ಚುವರಿಯಾಗಿ ಸೇರಿಸಿ ಪಾವತಿಸಲಾಗುವುದು.

iv. ಗ್ರೇಡ್-I ರಿಂದ ಗ್ರೇಡ್-VI ರವರೆಗಿನ ಶಸ್ತ್ರಚಿಕಿತ್ಸೆಗಳಿಗೆ ಚಿಕಿತ್ಸಾ ಅವಧಿ ಕೆಳಕಂಡಂತಿರುತ್ತದೆ:

ಗ್ರೇಡ್- I :1-2 ದಿನಗಳು

ಗ್ರೇಡ್- II :3-5 ದಿನಗಳು

*(Abdominal/ Thoracic cavity ಸಂಬಂಧಿಸಿದ ಶಸ್ತ್ರಚಿಕಿತ್ಸೆಗಳಿಗೆ 7-10 ದಿನಗಳು)*

ಗ್ರೇಡ್- III ರಿಂದ ಗ್ರೇಡ್-VI :12-14 ದಿನಗಳು

v. ಕನ್ಸಲ್ಟೇಷನ್ ಹಾಗೂ ತಪಾಸಣೆಗಳಿಗೆ ಬೆಂಗಳೂರಿನ ಸಿ.ಜಿ.ಹೆಚ್.ಎಸ್. ದರಗಳು ಅನ್ವಯಿಸುತ್ತವೆ.

vi. ಇಂಪ್ಲಾಂಟ್/ ಸ್ಟೆಂಟ್ / ಗ್ರಾಫ್ಟ್‌ಗಳ ವೆಚ್ಚಗಳಿಗೆ ಸಿ.ಜಿ.ಹೆಚ್.ಎಸ್. ಅನುಸಾರದ ಅರ್ಹ ಮೊತ್ತವನ್ನು ಶಸ್ತ್ರಚಿಕಿತ್ಸೆಯ ಪ್ಯಾಕೇಜ್ ದರಕ್ಕೆ ಹೆಚ್ಚುವರಿಯಾಗಿ ಸೇರಿಸಿ ಮರುಪಾವತಿಸಲಾಗುತ್ತದೆ.

vii. ಮರಪಾವತಿಯ ಅರ್ಹ ಮೊತ್ತವನ್ನು ಕೆಳಕಂಡ ಸೂತ್ರದನುಸಾರ ಲೆಕ್ಕಹಾಕುವುದು:

*" Room rent as applicable + Anaesthesia charges( as per Category) + OT charges (as per Category) + Surgery charges (as per Category) + Investigations at CGHS Rates + Cost of Medicines and Surgical Disposables "*

8. ಸರ್ಕಾರದ ಮಾನ್ಯತೆ ಹೊಂದಿಲ್ಲದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸಾ ವೆಚ್ಚವನ್ನು ಮರುಪಾವತಿಸುವ ಅರ್ಹ ಪ್ರಕರಣಗಳನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ನಿಯಮ ಸಡಿಲಿಸಿ ಮರುಪಾವತಿಸಲು ಮೊದಲಿಗೆ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಅಭಿಪ್ರಾಯವನ್ನು ತಪ್ಪದೇ ಪಡೆದುಕೊಳ್ಳತಕ್ಕದ್ದು. ನಂತರದಲ್ಲಿ ಪ್ರಸ್ತಾವನೆಯನ್ನು ಸಂಬಂಧಪಟ್ಟ ಆಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರಿಗೆ ಸಲ್ಲಿಸತಕ್ಕದ್ದು. ರೂ.2.00 ಲಕ್ಷಗಳನ್ನು ಮೀರಿದ ಪರಿಶೀಲನೆಗೊಳಪಟ್ಟ ಇಂತಹ ಪ್ರಕರಣಗಳನ್ನು ನಿಯಮ ಸಡಿಲಿಕೆಗಾಗಿ ತೀರ್ಮಾನಿಸಿದ ನಂತರವೇ ನಿರ್ದಿಷ್ಟ ಶಿಫಾರಸ್ಸಿನೊಂದಿಗೆ ಆಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರ ಮೂಲಕ ನಿಯಮ ಸಡಿಲಿಕೆಗಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸೇವಾ ನಿಯಮಗಳು ವಿಭಾಗಕ್ಕೆ ಕಳುಹಿಸತಕ್ಕದ್ದು.

...4

9. ಸರ್ಕಾರಿ ಆಸ್ಪತ್ರೆ/ ಸರ್ಕಾರದ ಮಾನ್ಯತೆ ಹೊಂದಿದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸಾ ವಿಧಾನ/ ಚಿಕಿತ್ಸಾ ವೆಚ್ಚದ ಬಗ್ಗೆ ಸಂದೇಹಗಳಿದ್ದಲ್ಲಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಅಭಿಪ್ರಾಯವನ್ನು ಪಡೆಯುವಂತೆ ಸೂಚಿಸಲಾಗಿದೆ.

10. ಈ ಅಧಿಕೃತ ಜ್ಞಾಪನದಲ್ಲಿನ ಸೂಚನೆಗಳನ್ನು ತಪ್ಪದೇ ಪಾಲಿಸತಕ್ಕದ್ದು ಹಾಗೂ ಇವುಗಳನ್ನು ಇಲಾಖೆಯ ಎಲ್ಲಾ ಅಧಿಕಾರಿ/ನೌಕರರುಗಳ ಗಮನಕ್ಕೆ ತರುವಂತೆಯೂ ಸಹ ಸೂಚಿಸಲಾಗಿದೆ.

(ಅಂಜುಂ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು.
2. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ,ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
3. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ವಿಧಾನ ಸೌಧ, ಬೆಂಗಳೂರು.
5. ಎಲ್ಲಾ ಇಲಾಖಾ ಮುಖ್ಯಸ್ಥರು.
6. ಎಲ್ಲಾ ಪ್ರಾದೇಶಿಕ ಆಯುಕ್ತರು.
7. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
8. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ್, ಚಾಣಕ್ಯಪುರಿ, ನವದೆಹಲಿ–110 011.
9. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು–560 009.
10. ಮಹಾ ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
11. ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.
12. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13. ನಿಬಂಧಕರು, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬೆಂಗಳೂರು.
14. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
15. ಸರ್ಕಾರದ ಎಲ್ಲಾ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
16. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು.

- www.sachivalaya.karnataka.gov.in ತಂತ್ರಾಂಶದಲ್ಲಿ ಈ ಸುತ್ತೋಲೆಯನ್ನು ವೀಕ್ಷಿಸಬಹುದು.
- http://msotransparent.nic.in/cghsnew/index.asp ತಂತ್ರಾಂಶದಲ್ಲಿ ಉಲ್ಲೇಖ(2)ರ ಭಾರತ ಸರ್ಕಾರದ ಸಿ.ಜಿ.ಹೆಚ್.ಎಸ್. ನಿರ್ದೇಶನಾಲಯದ ಕಛೇರಿ ಆದೇಶವನ್ನು ವೀಕ್ಷಿಸಬಹುದು.

*****